**ಓ ಎಸ್ ನಂ : 799/2014**

**ಪಿ. ಡಬ್ಲ್ಯೂ : 1**

**ದಿ:16.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ 12 ರಿಂದ 17 ರವರ ಪರವಾಗಿ ಎಸ್.ಜಿ.ಆರ್ ವಕೀಲರಿಂದ :**

ನಮ್ಮ ತಾತನ ಹೆಸರು ನನಗೆ ಜ್ಞಾಪಕವಿಲ್ಲ. ನಮ್ಮ ತಾತನ ಹೆಸರು ದೊಡ್ಡರಾಮಯ್ಯ ಎಂದರೆ ಇರಬಹುದು. ದೊಡ್ಡರಾಮಯ್ಯ ಇವರಿಗೆ ಅಜ್ಜನಹಳ್ಳಿ ಗ್ರಾಮದ ಸರ್ವೇ ನಂಬರ್ 26/2, 30, 12/2, 15 ಮತ್ತು 22 ಇವುಗಳಲ್ಲಿ ಜಮೀನು ಇದ್ದವು ಎಂದರೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ಸಾಕ್ಷಿಗೆ ಸರ್ವೇ ನಂಬರ್ 26/2 ಹಾಗೂ ಸರ್ವೇ ನಂಬರ 30 ಇವುಗಳ ಆರ್ ಟಿ ಸಿ ತೋರಿಸಿ ಅವುಗಳ ಪ್ರಕಾರ ರೇವಣ್ಣ ಮತ್ತು ಮಂಟಯ್ಯ ಇವರು ಹೆಸರು ಬಂದಿರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸರ್ವೇ ನಂಬರ್ 26/2 , 30, 12/2, 15 ಮತ್ತು 22 ಇವುಗಳಲ್ಲಿ ನಿಮಗೆ ಜಮೀನು ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ. ಸಾಕ್ಷಿಗೆ ಕೇಳಲಾದ ಪ್ರತಿ ಪ್ರಶ್ನೆಗೆ ಗೊತ್ತಿಲ್ಲ, ಸುಳ್ಳು ಎಂದು ಹೇಳುತ್ತಾರೆ.

ಎ.ಎಲ್ ಗಜೇಂದ್ರ ಮತ್ತು ಎ.ಎಲ್ ನರಸಿಂಹಮೂರ್ತಿ ನನ್ನ ಮಕ್ಕಳು ಎಂದರೆ ಸರಿ. ಸರ್ವೇ ನಂಬರ್ 26/2 ಇದರ ಆರ್ ಟಿ ಸಿ ಯಲ್ಲಿ ನನ್ನ ಇಬ್ಬರು ಮಕ್ಕಳು ಮತ್ತು ಪ್ರತಿವಾದಿ 12 ರಿಂದ 17 ಇವರ ಹೆಸರುಗಳು ಬಂದಿದೆ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಾತನ ಕಡೆಯಿಂದ ಬಂದ ಆಸ್ತಿಗಳಲ್ಲಿ ಅವರ ಮಕ್ಕಳು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿ ಪಿ 1 ನ್ನು ನಾನು ಕೊಟ್ಟಿರುವುದಿಲ್ಲ. ಅದು ಸುಳ್ಳು ದಾಖಲೆ ಇರುತ್ತದೆ. ನಿ ಪಿ 2 ರಿಂದ ನಿ ಪಿ 15 ರವರೆಗಿನ ಆರ್ ಟಿ ಸಿ ಗಳನ್ನು ತೋರಿಸಿದಾಗ ಸಾಕ್ಷಿ ಅವುಗಳನ್ನು ನಾನು ಕೊಟ್ಟಿಲ್ಲ, ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿ ಪಿ 17 ರಲ್ಲಿ ದೊಡ್ಡರಾಮಯ್ಯ ಇವರ ಮಗ ಎಂದು ಬರೆದಿರುವುದು ಸುಳ್ಳು ಇರುತ್ತದೆ. ಆ ರೀತಿ ಇರುವ ಯಾವುದೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ.

ನಾನು ಮತ್ತು ನನ್ನ ಮಕ್ಕಳು ಸೇರಿ ದಿನಾಂಕ :23.2.1998 ಮತ್ತು 15.1.2001 ರಂದು ಸಿದ್ದರಾಮಯ್ಯ ಇವರಿಗೆ ಎರಡು ಕ್ರಯಪತ್ರಗಳನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ಮಂಟಯ್ಯ ನ ಮಕ್ಕಳು ಈ ದಾವೆಯಲ್ಲಿ ಹಾಜರಾಗಿ ತಕರಾರು ಹಾಕಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ದೊಡ್ಡರಾಮಯ್ಯ ಇವರ ಮಕ್ಕಳಾದ ರೇವಣ್ಣ ಮತ್ತು ಮಂಟಯ್ಯ ಇವರು ಒಟ್ಟು ಕುಟುಂಬದ ಆದಾಯದಿಂದ ರಾಮಕ್ಕ ಇವರಿಂದ ಸ್ವತ್ತನ್ನು ಖರೀದಿ ಮಾಡಿದ್ದರು ಎಂದು ಹೇಳಿ ಬರೆಯಿಸಿದ್ದೇನೆ ಎಂದರೆ ಗೊತ್ತಿಲ್ಲ.  ದೊಡ್ಡರಾಮಯ್ಯ ಇವರಿಗೆ ಮಂಟಯ್ಯ ಎಂಬ ಮಗ ಇದ್ದನು ಎಂದು ತೋರಿಸಲು ಯಾವುದಾದರೂ ದಾಖಲೆ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ.  ಆ ಬಗ್ಗೆ ನನ್ನ ಪರವಾಗಿ ಸಾಕ್ಷಿ  ಮಾಡಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಸ್ವತ್ತುಗಳಲ್ಲಿ 3 ಎಕರೆ ಜಮೀನು ಮಂಟಯ್ಯ ಇವರ ಮಕ್ಕಳಿಗೆ ಬಂದಿತ್ತು. ಅವರು ಮತ್ತು ಅವರ ಮಕ್ಕಳು ಅವರು ಜೀವಂತ ಇದ್ದಾಗಿನಿಂದ ಸ್ವಾಧೀನಾನುಭವ ಮಾಡಿಕೊಂಡು ಬರುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಸುಮ್ಮನೆ ನಿಂತಿದ್ದರು. ನಮಗೆ ಬಂದಿದ್ದ ಜಮೀನನ್ನು ನಾವು ಎರಡು ಕ್ರಯಪತ್ರಗಳ ಮೂಲಕ ಸಿದ್ದರಾಮಯ್ಯ ಇವರಿಗೆ ಕ್ರಯ ಕೊಟ್ಟಿದ್ದೀರಿ ಎಂಬ ಪ್ರಶ್ನೆಗೆ ಸಹ ಸಾಕ್ಷಿ ಸುಮ್ಮನೆ ನಿಂತಿದ್ದಾರೆ.  ನನಗೆ ಓದಲು ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ಎಲ್ಲ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 9 ಮತ್ತು 10 ಇವುಗಳು ನಾನೇ ಹಾಜರುಪಡಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಅದರಲ್ಲಿ ರೇವಣ್ಣ ಹಾಗೂ ಪ್ರತಿವಾದಿಗಳಾದ 12 ರಿಂದ 17 ರವರ ತಂದೆಯ ಹೆಸರು ಇದೆ ಎಂದರೆ ಗೊತ್ತಿಲ್ಲ.  ಪ್ರತಿವಾದಿ 12 ರಿಂದ 17 ರವರ ತಂದೆ ಮಂಟಯ್ಯ ಇವರು ಎಂದರೆ ನನಗೆ ಗೊತ್ತಿಲ್ಲ.  ಅವರು ಪ್ರತಿವಾದಿ 12 ರಿಂದ 17 ರವರ ತಂದೆ ಎಂದು ಸೂಚಿಸುವುದು ಸರಿಯಲ್ಲ.  ದಾವಾ ಆಸ್ತಿಗಳಲ್ಲಿ ನನಗೆ ಯಾವುದೆ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಒಂದು ಸುಳ್ಳು ದಾವೆ ಮಾಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಾನು ಹಾಜರುಪಡಿಸಿದ ಆರ್ ಟಿ ಸಿ ಗಳಲ್ಲಿ ಮಂಟಯ್ಯ ಇವರ ಹೆಸರು ಬರುತ್ತಿರುವುದನ್ನು ನಾನು ಅಥವಾ ನನ್ನ ತಂದೆ ಪ್ರಶ್ನಿಸಿಲ್ಲ ಎಂದರೆ ಸರಿ. ನಾನು ಕೊಟ್ಟ ದಾಖಲೆಗಳನ್ನು ನಾನು ಕೊಟ್ಟಿಲ್ಲ ಎಂದು ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಆಸ್ತಿಗಳನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನನಗೆ ಏನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 12 ರಿಂದ 17 ರವರಿಂದ ಸ್ವಾಧೀನ ಬಿಡಿಸಿಕೊಡಿ ಎಂದು ದಾವೆ ಮಾಡಿಲ್ಲ. ದಾವೆ ಹಾಕಲು ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೆ ದಾವೆ ಹಾಕಿಲ್ಲ. ಈ ದಿನ ನನ್ನ ಮಕ್ಕಳಾದ ಎ.ಎಲ್ ನರಸಿಂಹಮೂರ್ತಿ ಮತ್ತು ಎ.ಎಲ್ ಗಜೇಂದ್ರ ಇರುತ್ತದೆ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**